ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ

ಸಿ ಸಿ ನಂಃ**480/2017**

## ಃ ಆಪಾದನೆ ಃ

ನಾನು ಸುರೇಶ ಅಣ್ಣಪ್ಪ ಸವದಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕನಕಪುರ, ಆದ ನಾನು

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಹಾರೋಹಳ್ಳಿ ಪೊಲೀಸ ಠಾಣೆ.

– ವಿರುದ್ಧ –

ಆರೋಪಿತನಾದ ಃ1. ಮನ್ಸೂರ್ ಅಹಮ್ಮದ್ ಎಂ
ಬಿನ್ ಮುಕ್ತರ್ ಅಹಮ್ಮದ್
ವಯಸ್ಸು 26 ವರ್ಷಗಳು
ವಾಸಃ ನಂ.11/1, ಕಾರ್ಟನ್ ರಸ್ತೆ
ಚಿಕ್ಕಪೇಟೆ
ಬೆಂಗಳೂರು

2. ಪ್ರಕಾಶ್ ಲಂಬಾಣಿ
ಬಿನ್ ಸೋಮಲಿಂಗು
ವಯಸ್ಸು 32 ವರ್ಷಗಳು
ವಾಸಃ 2 ನೇ ಕ್ರಾಸ್, ವಿವೇಕನಂದನಗರ
ಕನಕಪುರ ಟೌನ್ ಮತ್ತು ತಾಲ್ಲೂಕು

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ ಃ-

ದಿನಾಂಕ.15.12.2016 ರಂದು ಮಧ್ಯಾಹ್ನ ಸುಮಾರು 12ಃ30 ಗಂಟೆ ಸಮಯದಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ ಪೊಲೀಸ ಠಾಣೆ ಹದ್ದಿ ಪೈಕಿ ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಗಬ್ಬಾಡಿ ಗ್ರಾಮದ ಕೆರೆಯ ಏರಿಯ ಬಳಿ ಬೆಂಗಳೂರು-ಕನಕಪುರ ಮುಖ್ಯರಸ್ತೆ, ರಾಷ್ಟ್ರೀಯ ಹೆದ್ದಾರಿ-209 ರಲ್ಲಿ 1 ನೇ ಆರೋಪಿಯಾದ ನೀವು ಚಾಸಾ-13 ಶಹನಾ ಬೇಗಂ ರವರ ಬಾಬ್ತು ಕೆಎ-01-ಎಎ-4067 ರ ಐಚರ್ ಗೂಡ್ಸ್ ವಾಹನವನ್ನು ಬೆಂಗಳೂರು ಕಡೆಯಿಂದ ಕನಕಪುರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬಲಕ್ಕೆ ಹೋಗಿ ಎದುರುಗಡೆಯಿಂದ ಅಂದರೆ ಕನಕಪುರ ಕಡೆಯಿಂದ ಬರುತ್ತಿದ್ದ ಕೆಎ-42-ಜೆ-8576 ರ ಮೋಟಾರ್ ಸೈಕಲಿಗೆ ಡಿಕ್ಕಿ ಪಡಿಸಿದ ಪರಿಣಾಮ ಮೋಟಾರ್ ಸೈಕಲ್ ಸವಾರ ನವೀನ ವಿ.ಎನ್ ವಾಹನದ ಸಮೇತ ರಸ್ತೆಯ ಮೇಲೆ ಬಿದ್ದಾಗ ಬೈಕಿನ ಹಿಂಬದಿಯಿಂದ ಅಂದರೆ ಕನಕಪುರದ ಕಡೆಯಿಂದ ಬರುತ್ತಿದ್ದ 2 ನೇ ಆರೋಪಿಯಾದ ನೀವು ಕೆಎ-42-ಎಫ್-737 ರ ಕೆ.ಎಸ್.ಆರ್.ಟಿ.ಸಿ ಬಸ್ಸಿನ ಚಾಲಕ ತನ್ನ ಬಸ್ಸನ್ನು ನಿಯಂತ್ರಿಸಿಕೊಳ್ಳಲು ಆಗದೇ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಿಸಿ ರಸ್ತೆಯಲ್ಲಿ ಬಿದ್ದ ನವೀನನ ಮೇಲೆ ಬಸ್ಸಿನ ಚಕ್ರವನ್ನು ಹರಿಸಿದ

ಪರಿಣಾಮ ಆತನ ಬಲಗಣ್ಣು, ಎಡಭುಜ, ಬಲಮೊಣಕೈ, ಬಲಗಾಲು, ಎಡಹೊಟ್ಟೆ ಹಾಗೂ ಸೊಂಟದ ಬಲಭಾಗದಲ್ಲಿ ತೀವ್ರ ರಕ್ತಗಾಯಗಳಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಫಲಕಾರಿಯಾಗದೇ ಅದೇ ದಿನ ಸಂಜೆ 5:15 ಗಂಟೆಗೆ ಮೃತಪಟ್ಟಿದ್ದು, ಭಾರತ ದಂಡ ಸಂಹಿತೆ ಕಲಂ 279 ಮತ್ತು 304(ಎ) ರಡಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕ:20.05.2024 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಕನಕಪುರ –

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉ:

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉ:

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಡಿಕರಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಕನಕಪುರ